# ನಮ್ಮನ್ನಗಲಿದ ನಾಯಕರು



## ಹಾಜಿ ಅಮೀರುದ್ದೀನ್ ಸಾಹೇಬ್

ಉಡುಪಿಯ ಖ್ಯಾತ ಉದ್ಯಮಿಗಳಲ್ಲಿ ಒಬ್ಬರಾದ ಅಮೀರುದ್ದೀನ್ ಸಾಹೇಬರು ಎಲ್ಲರಿಗೂ ಪರಿಚಿತರು. ಮಾತು ಕಡಿವೆಯಾದರೂ ಚಿಂತನೆಯಲ್ಲಿ ಏನೂ ಕಡಿಮೆ ಇಲ್ಲ. ಎಸೋಸಿಯೇಶನ್ ಸ್ಥಾಪನೆಯ ವಿಷಯ ಅವರೊಡನೆ ಪ್ರಾಸ್ಥಾಪಿಸಿದಾಗ ತನ್ನ ಸಂಪೂರ್ಣ ಸಹಕಾರದ ಭರವಸೆ ನೀಡಿ ಅದರಂತೆ ನಡೆದು ತೋರಿಸಿದರು. ಸ್ಥಾಪಕ ಅಧ್ಯಕ್ಷರಾಗಿ ಆಯ್ಕೆಗೊಂಡ ಎಲ್ಲ ಕಾರ್ಯಕರ್ತರಿಗೂ ಉತ್ತೇಜನ ನೀಡಿ ಸಂಸ್ಥೆಯನ್ನು ಮುನ್ನಡೆಸಿದರು. ತನ್ನ ಕುಡುಂಬದ ಎಲ್ಲಾ ಪುರುಷರನ್ನು ಸಂಸ್ಥೆಯ ಅಜೀವ ಸದಸ್ಯರಾಗಿ ಸೇರಿಸಿ ಮಾದರಿ ಎನಿಸಿದರು. ಸಂಸ್ಥೆಯು ಹಮ್ಮಿಕೊಂಡ ಎಲ್ಲಾ ಕಾರ್ಯಕ್ರಮಗಳಿಗೆ ಸರ್ವರೀತಿಯ ಪ್ರೋತ್ಸಾಹ ಮತ್ತು ಸಹಕಾರವನ್ನು ನೀಡಿ ಸಂಸ್ಥೆಯು ಉಡುಪಿ ನಗರದಲ್ಲಿ ಬಡ ಮುಸ್ಲಿಮರ ಸೇವೆಯ ಹಾದಿಯಲ್ಲಿ ಜನ ಮನ್ನಣೆ ಗಳಿಸಲು ಕಾರಣ ಕರ್ತರಾದರು. ಎಸೋಸಿಯೇಶನ್ ಸ್ಥಾಪನೆಯ ಕೆಲವೇ ವರ್ಷಗಳಲ್ಲಿ ಅಮೀರುದ್ದೀನ್ ಸಾಹೇಬರು ಇಹಲೋಕವನ್ನು ತ್ಯಜಿಸಿದರೂ ಅವರೊಂದಿಗಿನ ನಮ್ಮ ಒಡನಾಟವು ಚಿರಸ್ಮರಣೀಯ.

---

## ಹಾಜಿ ಅಬ್ದುಸ್ಸಲಾಮ್



ಉಡುಪಿಯವರೇ ಆದ ಅಬ್ದುಸ್ಸಲಾಮ್ ಸಾಹೇಬರು ಉದ್ಯಮಿಯಾಗಿದ್ದರೂ ತನ್ನನ್ನು ಸದಾ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಯುವ ಪ್ರಾಯದಿಂದಲೇ ಸಂಘಟನೆಗಳೊಂದಿಗೆ ಗುರುತಿಸಿಕೊಂಡವರು. ಇಸ್ಲಾಮೀ ಕಾರ್ಯಕರ್ತನಾಗಿ ಮುಂದಕ್ಕೆ ಮಾರ್ಗದರ್ಶಕನಾಗಿ ತನ್ನ ಬದುಕನ್ನು ಸಾರ್ಥಕಗೊಳಿಸಿದವರು. ಎಸೋಸಿಯೇಶನ್‌ನ ಸ್ಥಾಪನೆ ಮತ್ತು ಅಭಿವೃದ್ಧಿಯಲ್ಲಿ ಇವರ ಪಾತ್ರವು ಸದಾ ನೆನೆಪಿರುವಂತಹದ್ದು. ಸಂಸ್ಥೆಯು ಯಾವುದೇ ಕಾರ್ಯಕ್ರಮವನ್ನು ಕೈಗೆತ್ತಿಕೊಂಡರೆ ಅದರ ಯಶಸ್ಸಿಗೆ ತ್ವರಿತವಾಗಿ ದೇಣಿಗೆಗಳನ್ನು ಸಂಗ್ರಹಿಸುವ ಉಸ್ತುವಾರಿ ವಹಿಸಿಕೊಳ್ಳುತ್ತಿದ್ದರು. ಸದಾ ಹಸನ್ಮುಖಿಯಾಗಿರುತ್ತಿದ್ದ ಅಬ್ದುಸ್ಸಲಾಮ್ ಎಂತಹ ಸಮಸ್ಯೆ ಎದುರಾದರೂ  ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಬದಲಾಗಿ ಸಮಸ್ಯೆಗಳ ಪರಿಹಾರಕ್ಕಾಗಿ ಸಮಾಲೋಚನೆ ನಡೆಸಿ ಯಶಸ್ವಿಯಾಗುತ್ತಿದ್ದರು. ಇಂತಹ ಲವಲವಿಕೆಯಿಂದ ಕೂಡಿದ ವಿಶಿಷ್ಟ ವ್ಯಕ್ತಿತ್ವವು ಈಗ ನಮ್ಮ ಮುಂದಿಲ್ಲವಾದರೂ ಅವರ ಉತ್ಸಾಹ, ನಿಷ್ಠೆ ಮತ್ತು ಕಾರ್ಯ ತತ್ಪರತೆಯು ನಮಗೆಲ್ಲ ಅವಿಸ್ಮರಣೀಯ.

---



## ಶೇಖ್ ಅಬ್ದುಲ್ ಖಾದರ್

ಶೇಖ್ ಸಾಹೇಬರದ್ದು ಬಹುಮುಖ ಪ್ರತಿಭೆ. ಶೇಖ್ ಭ್ಯಾ ಎಂದೇ ಗುರುತಿಸಲ್ಪಡುವ ಇವರು ನೀಳ ಕಾಯದ ಅಜಾನುಬಾಹು ವ್ಯಕ್ತಿ. ಸರಳ ಜೀವನ ಮತ್ತು ಉನ್ನತ ಚಿಂತನೆ ಇವರ ವೈಶಿಷ್ಟ್ಯ. ಚರ್ಚೆಗೆ ಇಳಿದರೆಂದರೆ ಎದುರಾಳಿಯ ಸೋಲು ಖಚಿತ. ಅಪ್ರತಿಮ ಮಾತುಗಾರ, ಹಂಗಿಲ್ಲದ ಬದುಕು. ಸಮಸ್ಯೆಗಳ ಪರಿಹಾರಕ್ಕೆ ಶೀಘ್ರ ಉಪಾಯ. ಉರ್ದು ಮತ್ತು ಕನ್ನಡ ಭಾಷೆಗಳ ಮೇಲೆ ಅಗಾದ ಹತೋಟಿ. ಕನ್ನಡದ ಒಳ್ಳೆಯ ಬರಹಗಾರ. ಸೇವೆಗೈಯಲು ಒಂದು ಸುದೃಢ ಸಂಸ್ಥೆಯ ಅಗತ್ಯವಿದೆಎಂಬ ಚಿಂತನೆಯು ಖಂಡಿತವಾಗುಯೂ ಇವರದ್ದು. ತಮ್ಮ ಅಂಗಡಿಯಿಂದ ಇದಕ್ಕೆ ಬೇಕಾದ ಪೂರಕ ಸಿದ್ಧತೆಗಳುನಡೆದಿದ್ದುದು. ಇಲ್ಲಿಂದಲೇ ಸಂಸ್ಥೆಯ ಆರಂಭ. ಎಲ್ಲಾ ಬಗೆಯ ಸಮಾಲೋಚನೆಗಳಿಗೆ ಇವರ ಅಂಗಡಿಯೇ ಚಾವಡಿ.

ಸಂಸ್ಥೆ ಕೈಗೊಂಡ ಎಲ್ಲಾ ಜನಹಿತ ಯೋಜನೆಗಳು ಶೇಖ್ ಸಾಹೇಬರ ಚಿಂತನೆಯ ಫಲ. ತಾನು ಯೋಚಿಸಿದ್ದನ್ನು ಸಂಗಾತಿಗಳ ಮುಂದಿಟ್ಟು ಒಪ್ಪಿಸುವಲ್ಲಿ ನಿಸ್ಸೀಮರು. ಆದರೂ ಯೋಜನೆಗಳು ಇತರರ ಸೂಚನೆಗಳೆಂದು ತೋರಿಸುವಷ್ಟು ಸರಳತೆ. ಇವರನ್ನು ಪ್ರಥಮಬಾರಿ ಭೇಟಿಯಾಗಿ ಇವರ ಮಾತುಗಳನ್ನು ಆಲಿಸಿದವರು ಇನ್ನೊಮ್ಮೆ ಭೇಟಿಯಾಗಲು ತವಕ ಪಡುವಷ್ಟು ಆಕರ್ಷಕ ವ್ಯಕ್ತಿತ್ವ. ಇವರ ಮಾತುಗಾರಿಕೆ ಮತ್ತು ಚಿಂತನೆಗಳನ್ನು ಕೇಳಲು ಮಿತ್ರರು ಇವರ ಅಂಗಡಿಯಲ್ಲಿ ಸೇರುತ್ತಿದ್ದರು. ಆ ದಿನಗಳನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

ಸಂಸ್ಥೆಯ ಪ್ರಥಮ ವರ್ಷದ ಸಮಿತಿಯನ್ನು ರಚಿಸುವಾಗ ತಾನು ಯಾವುದೇ ಪದಾಧಿಕಾರವನ್ನು ವಹಿಸದೆ ಇತರರನ್ನು ಮುಂದೂಡಿದರು. ಧಾರ್ಮಿಕ ವಿದ್ವಾಂಸರೊಡನೆ ಸಂವಾದಕ್ಕೆ ಕುಳಿತರೆ ಕೇಳುಗರು ಮೈಮರೆಯುವಷ್ಟು ಜ್ಞಾನದ ಪ್ರದರ್ಶನ, ಶೇಖ್ ಭ್ಯಾಯವರಿಂದ. ಇವರ ಅಭಿಮಾನಿಗಳಲ್ಲಿ ಕಿರಿಯರು, ಹಿರಿಯರು, ರಾಜಕೀಯ ಮತ್ತು ಧಾರ್ಮಿಕ ವ್ಯಕ್ತಿಗಳೂ ಸಮಾಜ ಸೇವಕರೂ ಊರಿನ ಪ್ರಮುಖರೂ ಇದ್ದರು. ಈಗ ಇವರು ನಮ್ಮ ಮುಂದಿಲ್ಲವಾದರೂ ಇವರ ಬಹುಮುಖ ಪ್ರತಿಭೆ, ಸರಳ ಜೀವನ ಮತ್ತು ಸಮುದಾಯದ ಕಳಕಳಿ ನಮಗೆ ಸದಾ ಸ್ಮರಣೀಯ.

## ಹಾಜಿ ಟಿ.ಎಸ್. ಸುಲೈಮಾನ್



ಉಡುಪಿ ತಾಲೂಕಿನ ಕೋಡಿ ಬಂಗ್ರೆಯ ಮೂಲ ನಿವಾಸಿಯಾದ ಸುಲೈಮಾನ್ ಸಾಹೇಬರು ಅವಿಭಜಿತ ದ.ಕ. ಜಿಲ್ಲೆಯ ಅತ್ಯಂತ ಜನಪ್ರಿಯ ವ್ಯಕ್ತಿ. ಮುಸ್ಲಿಮ್ ವೆಲ್ಫೇರ್ ಎಸೋಸಿಯೇಶನ್‌ನ ಸ್ಥಾಪನೆ ಯಾಗುವ ಮೊದಲೇ ಒಬ್ಬ ಸಮಾಜ ಸೇವಕನಾಗಿ ಗುರುತಿಸಲ್ಪಟ್ಟವರು. ರಾಜಕೀಯ ರಂಗದಲ್ಲೂ ಎತ್ತಿದ ಕೈ ಹತ್ತು ಹಲವಾರು ಸಂಘಟನೆಗಳಲ್ಲಿ ಸಕ್ರಿಯ ಪಾತ್ರ, ಕೋಡಿ ಬೆಂಗ್ರೆಯ  ಯುವಕ ಮಂಡಲವನ್ನು 1967ರಲ್ಲಿ ಸ್ಥಾಪಿಸಿದವರು.

ನಮ್ಮ ಸಂಸ್ಥೆಯು ಸ್ಥಾಪನೆಯಾದಾಗ ಟಿ.ಎಸ್. ಸುಲೈಮಾನ್‌ರವರು ಸ್ವಯಂ ಇಚ್ಛೆಯಿಂದ ಬಂದು ಸದಸ್ಯರಾದವರು. ಅನಂತರ ಹಲವು ವರ್ಷ ಕಾರ್ಯಕಾರಿ ಸಮಿತಿಯ ಸದಸಯರಾಗಿ ಸೇವೆ ಸಲ್ಲಿಸಿದ್ದಾರೆ. ಕಾರ್ಯದರ್ಶಿಯಾಗಿಯೂ, ಅಧ್ಯಕ್ಷರಾಗಿಯೂ ಕರ್ತವ್ಯ ನಿಭಾಯಿಸಿದ್ದಾರೆ.

ಸುಲೈಮಾನ್ ಸಾಹೇಬರಿಗೆ ಸಾಧ್ಯವಿಲ್ಲದ ಕೆಲಸ ಯಾವುದೂ ಇರಲಿಲ್ಲ. ಎಂತಹ ಸಮಸ್ಯೆ ಬಂದರೂ ಎದುರಿಸುವ ಸಾಮರ್ಥ್ಯ. ನ್ಯಾಯಾಂಗ ಮತ್ತು ಕಾರ್ಯಾಂಗದಲ್ಲಿ ಇರುವ ತನ್ನ ಪ್ರಭಾವವನ್ನು ಬಳಸಿ ಎಂತೆತಹ ಸಮಸ್ಯೆಗಳನ್ನು ಬಗೆಹರಿಸಿದವರು. ಸಂಸ್ಥೆಯು ಹಮ್ಮಿಕೊಳ್ಳುತ್ತಿದ್ದ ಎಲ್ಲಾ ಸಾರ್ವಜನಿಕ ಸಮಾರಂಭಗಳಲ್ಲಿ ಇವರದ್ದು ಪ್ರಮುಖ ಪಾತ್ರ. ಮುಖ್ಯ ಅತಿಥಿಗಳನ್ನು ಪಡೆಯುವಲ್ಲಿ ಇವರ ಸಹಕಾರ ವಿಶೇಷವಾದದ್ದು. ಯಾವಾಗಲೂ ಹಸನ್ಮುಖಿಯಾಗಿರುತ್ತಿದ್ದ ಸುಲೈಮಾನ್ ಸಾಹೇಬರು ಅಜಾತ ಶತ್ರು ಆಗಿದ್ದರು. ನಮ್ಮ ಸಮಾಜದಲ್ಲಿ ಇವರದ್ದು ಅಪರೂಪದ ವ್ಯಕ್ತಿತ್ವ ಸಂಸ್ಥೆಗೆ ಇವರು ಸಲ್ಲಿಸಿದ ಸೇವೆ ಅಪಾರ.



## ಕೆ.ಆರ್. ಅಬ್ದುಲ್ ಹಮೀದ್

ಅಬ್ದುಲ್ ಹಮೀದ್ ಸಾಹೇಬರದ್ದು ವಿಶಿಷ್ಟ ಬದುಕು. ಮಧ್ಯ ಪ್ರಾಯದಲ್ಲೇ ಉದ್ಯೋಗಕ್ಕೆ ತಿಲಾಂಜಲಿಯಿಟ್ಟು ಮುಸ್ಲಿಮ್ ವೆಲ್ಫೇರ್ ಎಸೋಸಿಯೇಶನ್‌ನ ಸೇವೆಯಲ್ಲಿಯೇ ಸಮಯ ಕಳೆದವರು. ಸಂಸ್ಥೆಯ ಆರಂಭ ಕಾಲದಲ್ಲಿ ಸ್ವಂತ ಕಛೇರಿ ಇಲ್ಲದೆ ಶೇಖ್ ಭ್ಯಾಯವರ ಅಂಗಡಿಯ ಒಂದು ಕಪಾಟು ಇಟ್ಟು ಕಾರ್ಯ ಚರಿಸುತ್ತಿದ್ದ ಕಾಲ.ಸಂಸ್ಥೆಗೆ ಸಂಬಂಧಪಟ್ಟ ಎಲ್ಲ ದಾಖಲೆ ಪತ್ರಗಳ ಜೋಪಾನೆಯ ಜವಾಬ್ದಾರಿಯನ್ನು ಸ್ವತಃ ಹಮೀದ್ ಸಾಹೇಬರು ವಹಿಸಿಕೊಂಡು ಒಂದೇ ಒಂದು ದಾಖಲೆಯು ಕಳೆದು ಹೋಗದಂತೆ ಜಾಗ್ರತೆ ವಹಿಸುತ್ತಿದ್ದರು. ಪ್ರಶ್ನಾತೀತ ನಿಷ್ಠೆಯಾಗಿತ್ತು. ಸಂಸ್ತೆಯ ಚಟುವಟಿಕೆಗಳಲ್ಲಿ ಹಿರಿಯರಾಗಿದ್ದರೂ ಬಾಲಕರಂತೆ ಓಡಾಡಿಕೊಂಡು ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗಿರುತ್ತಿದ್ದರು. ಸುನ್ನತ್ ಕಾರ್ಯಕ್ರಮಗಳ ಸಂದರ್ಭದಲ್ಲಿ ಸುನ್ನತ್‌ಗಾಗಿ ಮಕ್ಕಳನ್ನು ಹಿಡಿದುಕೊಳ್ಳುವ ಕೆಲಸವನ್ನು ಅವರು ಜೀವಿಸದಷ್ಟು ಕಾಲ ಅವರೇ ಮಾಡುತ್ತಿದ್ದರು. ಸಂಸ್ಥೆಯ ಬಗ್ಗೆ ಅಗಾದ ಕಾಳಜಿಯಲ್ಲದೆ ಅವರಿಗೆ ಬೇರೆ ಯಾವುದೇ ಪ್ರಾಪಂಚಿಕ ವಿಷಯದಲ್ಲಿ ಆಸಕ್ತಿ ಇರಲಿಲ್ಲ.

ಸಂಸ್ಥೆಯ ಅಪಾಧಿಕಾರವನ್ನು ಎಂದಿಗೂ ಸ್ವೀಕರಿಸದ ಹಮೀದ್ ಭ್ಯಾ ಕಪಾಟಿನಿಂದ ಯಾವುದಾದರು ದಾಖಲೆಯನ್ನು ಕೇಳಿದಾಕ್ಷಣ ತೆಗೆದು ಕೊಡುತ್ತಿದ್ದರು. ಸಂಸ್ಥೆಯ ಎಲ್ಲಾ ಸದಸಯರನ್ನು ಅತ್ಯಂತ ಗೌರವದಿಂದ ಮಾತನಾಡಿಸುತ್ತಿದ್ದರು. ಸದಸಯತನ ಹೆಚ್ಚಿಸುವಲ್ಲಿಯೂ ತುಂಬಾ ಆಸಕ್ತಿ ವಹಿಸುತ್ತಿದ್ದರು. ಇಂತಹ ಒಬ್ಬ ನಿಷ್ಠಾವಂತ ಕಾರ್ಯಕರ್ತನನ್ನು ಪಡೆಯುವುದು ಕಷ್ಟ ಸಾಧ್ಯ. ಬಡಜನರ ಸೇವೆಗೈಯುವ ಸಂಸ್ಥೆಯ ಸೇವೆಯನ್ನು ತನ್ನ ಜೀವನದ ಉದ್ದೇಶವೆಂದು ಬಗೆಯುತ್ತಲೇ ಇಹಲೋಕವನ್ನು ತ್ಯಜಿಸಿದರು.

## ಹಾಜಿ ಖತೀಬ್ ಅಬ್ಬಾಸ್



ಉಡುಪಿ ತಾಲೀಕಿನ ಮಲ್ಪೆಯ ಖ್ಯಾತ ಮತ್ಸ್ಯ ಉದ್ಯಮಿಯಾಗಿದ್ದ ಖತೀಬ್ ಅಬ್ಬಾಸ್‌ರನ್ನು ತಿಳಿಯದವರು ಕರಾವಳಿ ಕರ್ನಾಟಕದಲ್ಲಿ ವಿರಳವೆಂದೇ ಹೇಳಬಹುದು. ಎಲ್ಲಾ ಸಮುದಾಯವವರೊಂದಿಗೆ ಉತ್ತಮ ಭಾಂಧ್ಯವ್ಯವನ್ನು ಹೊಂದಿದ್ದ ಅಬ್ಬಾಸ್ ಭ್ಯಾಯವರು ಎಲ್ಲವರಿಗೂ ಬೇಕಾದವರಾಗಿದ್ದರು. ಮಲ್ಪೆಯ ವಿಷಯ ಬಂದಾಗ ಖತೀಬ್ ಅಬ್ಬಾಸ್‌ರವರ ನೆನಪು ಬಾರದಿರಲು ಸಾಧ್ಯವಿಲ್ಲ. ನಮ್ಮ ಸಂಸ್ಥೆಯ ಸ್ಥಾಪನೆ ಮತ್ತು ಬೆಳವಣಿಗೆಯಲ್ಲಿ ಇವರ ಪಾತ್ರವೂ ಮಹತ್ತರವಾದುದು. ತಾವೂ ಸದಸಯರಾದುದಲ್ಲದೇ ಮಲ್ಪೆಯಿಂದ ಅನೇಕ ಮಂದಿಯನ್ನು ಸಂಸ್ಥೆಯ ಸಜೀವ ಸದಸ್ಯರನ್ನಾಗಿ ಸೇರಿಸಿದವರು. ತಮ್ಮ ವ್ಯವಹಾರದ ಮಧ್ಯೆ ಬಿಡುವಾಗಲೆಲ್ಲಾ ಉಡುಪಿಗಡ ಬಂದು ಶೇಖ್ ಭ್ಯಾ ಮತ್ತಿತರ ಸಂಗಾತಿಗಳೊಂದಿಗೆ ಕುಳಿತಿ ಗಂಟೆಗಟ್ಟಲೆ ಸಮಾಲೋಚನೆಯಲ್ಲಿ ತೊಡಗುತ್ತಿದ್ದರು. ಹಿರಿಯ ವಯಸ್ಸಿನಲ್ಲೂ ಯುವಕರನ್ನು ಮೀರುವ ಉತ್ಸಾಹದ ಚಿಲುಮುಯಾಗಿದ್ದ ಖತೀಬ್ ಅಬ್ಬಾಸ್ ಸಾಹೇಬರು, ಸಂಸ್ಥೆಯ ಮಾರ್ಗದರ್ಶಕರಾಗಿದ್ದರು.

## ಮಕ್ಬೂಲ್ ಹಯಾತ್



ಮಕ್ಬೂಲ್ ಹಯಾತ್ ಎಂದರೆ ಮುಸ್ಲಿಮ್ ವೆಲ್ಫೇರ್ ಎಸೋಸಿಯೇಶನ್‌ನ ಅವಿಭಾಜ್ಯ ಅಂಗ. ಸಂಸ್ಥೆಯ ಆರಂಭದಿಂದ ಪ್ರಸಕ್ತ ವರ್ಷದವರೆಗೂ ಕಾರ್ಯಕಾರಿ ಸಮಿತಿಯಲ್ಲಿದ್ದು ಅವಿಶ್ರಾಂತಿ ಸೇವೆಗೈದವರು. ಕೋಶಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದವರು. ಉಡುಪಿ ಜಾಮಿಯಾ ಮಸೀದಿಯ ಆಡಳಿತ ಸಮಿತಿಯ ಸದಸ್ಯರಾಗಿ ಮತ್ತು ಜಮೀಯತುಲ್ ಫಲಾ ಉಡುಪಿ ಘಟಕದ ಸಕ್ರಿಯ ಕಾರ್ಯಕರ್ತನಾಗಿಯೂ ಸೇವೆ ಸಲ್ಲಿಸಿದ್ದಾರೆ. ಸಂಸ್ಥೆಯು ಕೈಗೊಳ್ಳುವ ಫಿತ್ರ ವಿತರಣೆ, ಝಕಾತ್ ವಿತರಣೆ, ವಿದ್ಯಾರ್ಥಿವೇತನ ಮುಂತಾದ ಯೋಜನೆಗಳಲ್ಲಿ ಇವರ ಸೇವೆ ಅದ್ವಿತೀಯ. ಹಾಗೆಯೇ ಸುನ್ನತ್ ಕಾರ್ಯಕ್ರಮದಲ್ಲೂ ಕೂಡ. ವಿಶೇಷವಾಗಿ ಸಂಸ್ಥೆಯ ವತಿಯಿಂದ ಜಾಮಿಯಾ ಮಸೀದಿಯಲ್ಲಿ ನಡೆಯುವ ಇಫ್ತಾರ್ ಸಂದರ್ಭದಲ್ಲಂತೂ ಬಿಡುವಿಲ್ಲದ ಶ್ರಮ, ತಿಂಗಳಿಡೀ ಇಫ್ತಾರ್ ವ್ಯವಸ್ಥೆಯ ಚಿಂತೆ. ಸಾರ್ವಜನಿಕರಿಂದ ಈ ಪ್ರಯುಕ್ತ ದೇಣಿಗೆ ಪಡೆಯುವುದರಿಂದ ಹಿಡಿದು ಅಂಗಡಿಗಳಿಂದ ತರಕಾರಿ ಮತ್ತು ದಿನಸಿ ಸಾಮಾಗ್ರಿಗಳನ್ನು ಖರೀದಿಸುವವರೆಗೆ ಎಲ್ಲ ಕೆಲಸಗಳಲ್ಲೂ ಮುಂಚೂಣಿಯಲ್ಲಿರುತ್ತಿದ್ದವರು.

ಸಂಸ್ಥೆಯ ರಜತ ಮಹೋತ್ಸವ ಆಚರಣೆ ಪ್ರಯುಕ್ತ ಆರಂಭಿಸಲಾದ ಸಿದ್ಧತೆಯಲ್ಲಿ ಅಪಾರ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದರು. ಎಂತಹ ಜವಾಬ್ದಾರಿ ವಹಿಸಿದರೂ ಯಶಸ್ವಿಯಾಗಿ ನಿಭಾಯಿಸುತ್ತಿದ್ದರು. ಶಿಸ್ತು ಬದ್ಧ ಜೀವನ ನಡೆಸುತ್ತಿದ್ದರು.

ಸಂಸ್ಥೆಗೆ ಒಂದು ವಿಶಾಲವಾದ ಕಾರ್ಯಾಲಯವನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರವಹಿಸಿ ಮುಂದುವರಿಯುತ್ತಿದ್ದಾಗಲೇ ಅಲ್ಪಕಾಲದ ಅನಾರೋಗ್ಯಕ್ಕೆ ತುತ್ತಾಗಿ ನಮ್ಮನ್ನೆಲ್ಲ ಅಗಲಿ ಹೋದರು. ಅಲ್ಲಾಹನು ಅವರಿಗೆ ಮಗ್‌ಫಿರತ್ತನ್ನು ನೀಡಲಿ ಎಂದು ನಮ್ಮ ಪ್ರಾರ್ಥನೆ, ಇವರ ಅಗಲಿಕೆಯಿಂದಾದ ನಷ್ಟವನ್ನು ಭರಿಸುವ ಶಕ್ತಿಯನ್ನು ಸಂಸ್ಥೆಗೆ ಅಲ್ಲಾಹನು ನೀಡಲಿ. ಆಮೀನ್.....